ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಬನಶಂಕರಿ 6ನೇ ಹಂತದ 4 `ಟಿ' ಬ್ಲಾಕ್ ಬಡಾವಣೆಯ ಕುಂದುಕೊರತೆ ಕುರಿತು

ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ) :-

718 (886) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣಗೊಂಡಿರುವ ಬನಶಂಕರಿ 6ನೇ ಹಂತದ 4ನೇ `ಟಿ' ಬ್ಲಾಕ್ (ಮುಂದುವರೆದ ಬಡಾವಣೆ) ನಲ್ಲಿ ಹಾದು ಹೋಗಿರುವ ಕಾವೇರಿ ನೀರಿನ ಪೈಪ್‌ಲೈನ್‌ನ ಸುತ್ತಮುತ್ತ ಫೆನ್ಸಿಂಗ್‌ನ್ನು ಅಳವಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ;

(ಆ) ಇದ್ದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು ;

(ಇ) ಸದರಿ ಬಡಾವಣೆಯ ರಸ್ತೆಗಳಿಗೆ ಸಂಖ್ಯೆಯನ್ನು ಇದುವರೆವಿಗೂ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಇದರಿಂದ ಬಡಾವಣೆಯಲ್ಲಿನ ನಿವಾಸಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದು, ಈ ಬಗ್ಗೆ ಸರ್ಕಾರ ಕ್ರಮಕೈಗೊಳ್ಳುವುದೇ ;

(ಉ) ಬಡಾವಣೆಯ ಹತ್ತಿರದಲ್ಲಿರುವ ತಲಘಟ್ಟಪುರ ಕೆರೆಯು ತ್ಯಾಜ್ಯಗಳಿಂದ ಮಲೀನವಾಗಿದ್ದು, ಅದರ ನಿರ್ವಹಣೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೇ;

(ಊ) ಸದರಿ ಕೆರೆಯ ಸುತ್ತ ಮುತ್ತ ಹಾಗೂ ಬನಶಂಕರಿ 6ನೇ ಹಂತದ 4ನೇ `ಟಿ' ಬ್ಲಾಕ್ (ಮುಂದುವರೆದ ಬಡಾವಣೆ) ನಲ್ಲಿರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಇಲ್ಲವಾದಲ್ಲಿ ಯಾವಾಗ ಕ್ರಮ ಕೈಗೊಳ್ಳುವುದು ;

(ಋ) ಬಡಾವಣೆಯಲ್ಲಿ ಅಳವಡಿಸಿರುವ Street lights ಗಳು ತುಂಬಾ ಹಳೆಯದಾಗಿದ್ದು, ಪ್ರಕಾಶಮಾನ ಬೆಳಕು ಚೆಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಎ) ಇಲ್ಲಿನ ನಾಗರಿಕರು ಬಹುತೇಕ ವಿದ್ಯುತ್ ತೊಂದರೆಯನ್ನು ಅನುಭವಿಸುತ್ತಿದ್ದು, ಸೂಕ್ತ Transforms ಅನ್ನು ಅಳವಡಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೇ ; ಇದ್ದರೆ ಯಾವಾಗ ಕ್ರಮ ಕೈಗೊಳ್ಳುವುದು ;

(ಏ) ರಾತ್ರಿ ಹೊತ್ತು ಮಂದ ಬೆಳಕು ಇರುವುದರಿಂದ ನಾಗರಿಕರು ಸದರಿ ಬಡಾವಣೆಯಲ್ಲಿ ಸಂಚರಿಸಲು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದು, ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?